ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
ಯಾದಗಿರಿ.

ಸಿ.ಸಿ. ನಂಃ **810/2019**

ಫಿರ್ಯಾಧಿಕಾರಃ ಕರ್ನಾಟಕ ಸರ್ಕಾರದ ಪರವಾಗಿ ರಾಯಚೂರು ರೈಲ್ವೆ ಪೊಲೀಸ್ ಠಾಣೆ.

// ವಿರುದ್ಧ //

ಆರೋಪಿತರು ಃ ಮಹಾದೇವ ಮತ್ತು ಇನ್ನೊಬ್ಬರು.

<u>ದೋಷಾರೋಪಣೆ</u>

ನಾನು ಅರುಣ ಚೌಗುಲೆ ಬಿ.ಎ.,ಎಲ್.ಎಲ್.ಬಿ.,(Honors) ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು ಯಾದಗಿರಿ, ಈ ಕೆಳಕಂಡ ಆರೋಪಿತರು ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕಃ 12.03.2019 ರಂದು 7.30 ಪಿ.ಎಂ ಸುಮಾರಿಗೆ ರಾಯಚೂರು ರೈಲ್ವೆ ಪೋಲಿಸ್ ಠಾಣೆಯ ಹದ್ದಿಯ ಪೈಕಿ ಯಾದಗಿರಿ ರೈಲ್ವೆ ನಿಲ್ದಾಣದ ವೇದಿಕೆ ನಂ.2-3 ರಲ್ಲಿ ರೈಲು ಗಾಡಿ ಸಂಖ್ಯೆ 11302 ಉದ್ಯಾನ್ ಎಕ್ಸ್ ಪ್ರೆಸ್ ಗಾಡಿಯು ಬಂದು ನಿಂತಾಗ, ಮುಂದಿನ ಜನರಲ್ ಬೋಗಿ ಹತ್ತಿರ 1 ನೇ ಆರೋಪಿಯಾದ ನೀವು 120 ಲೀಟರ್ ಮಾನವ ಜೀವಕ್ಕೆ ಅಪಾಯಕಾರಿಯಾದ ಸೇಂದಿಯನ್ನು ಮಾರಟ ಮಾಡುವ ಉದ್ದೇಶದಿಂದ 2 ನೇ ಆರೋಪಿಯಿಂದ ತೆಗೆದುಕೊಂಡು ಬಂದು, ಅನದೀಕೃತವಾಗಿ ಸಾಗಾಣಿಕೆ ಮಾಡಿದ್ದು, ಈ ಮೂಲಕ ಆರೋಪಿತರಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

2. ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿರಾದ ನೀವು ಉದ್ದೇಶ ಪೂರ್ವಕವಾಗಿ ಅಕ್ರಮವಾಗಿ ಮಾನವನು ಸೇವಿಸಿದರೆ ಜೀವಕ್ಕೆ ಹಾನಿಯುಂಟಾಗುವ ಹಾಗೂ ಮಾನವನ ಸೇವನೆಗೆ ಯೋಗವಲ್ಲದ ಸೆಂದಿಯನ್ನು ಯಾವುದೇ ಅದೀಕೃತ ಲೈಸೆನ್ಸ್ ಇಲ್ಲದೆ ಸಾಗಣಿಕೆ ಮಾಡಿ ಮಾರಾಟ ಮಾಡಿದ್ದು, ಈ ಮೂಲಕ ನೀವು ಭಾ.ದಂ.ಸಂ. 284 ಕಲಂ ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಇಂದು ದಿನಾಂಕಃ 25.07.2024 ರಂದು ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಲಾಯಿತು.)

ದಿನಾಂಕಃ 25.07.2024

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಯಾದಗಿರಿ.